REGD. NO. S.NO.8/1966-67

S.J.M.Vidyapeetha (R.), Chitradurga

ESTD : 197
S.T.D.: 0837
PH : (0) : 26682
(R) : 26092

# S.J.M.V.B.A.J.S.S.
# ARTS & COMMERCE COLLEGE FOR WOMEN

RANEBENNUR - 581 115.
Dist. Haveri) (State : Karnataka

Affiliated to Karnataka State Akkamahadevi Women's University Vijapur

Fax : 08373-266826 E-mail : sjmv87college@gmail.com www.sjmvbajsswomenscollege.org



Ref. No. SJMV/WC/ Date :......................

**ಪತ್ರಿಕೆ ಪ್ರಕಟಣೆಗಾಗಿ** **ದಿನಾಂಕ: 05/06/2023**

ಮಾನ್ಯ ಸಂಪಾದಕರು
ಕನ್ನಡ ದಿನ ಪತ್ರಿಕೆ
ರಾಣೇಬೆನ್ನೂರು

**ಎಸ್.ಜೆ.ಎಂ.ವ್ಹಿ.ಬಿ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ,** ಚರ್ಚರೋಡ್ ರಾಣೇಬೆನ್ನೂರು. **ಎನ್.ಎಸ್.ಎಸ್. ಘಟಕ-1 ಮತ್ತು ಘಟಕ-2** ಹಾಗೂ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ** (ರಿ) ಇವರ ಸಂಯೋಗದೊಂದಿಗೆ ಜೂನ್ 05 ರ **ವಿಶ್ವ ಪರಿಸರ ದಿನಾಚರಣೆ**ಯ ನಿಮತ್ಯ ಮಹಾವಿದ್ಯಾಲಯದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಾ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಇದರ ಸೇವಾ ಪ್ರತಿನಿಧಿ ಹಾಗೂ ಮೇಲ್ವಿಚಾರಕರಾದ ಶ್ರೀಮತಿ **ಹಂಪಾವತಿ** ಇವರು ಮಾತನಾಡುತ್ತಾ, ವಿದ್ಯಾರ್ಥಿನಿಯರು ಪರಿಸರ ಸಂರಂಕ್ಷಣೆಯ ಜವಬ್ದಾರಿಯ ಜೊತೆಗೆ ವೃತ್ತಿಪರ ಕೊರ್ಸನೊಂದಿಗೆ ಕೌಶಲ್ಯ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಈ ಗ್ರಾಮಾಭಿವೃದ್ಧಿ ಯೋಜನೆಯು ಸತತವಾಗಿ ಪ್ರಯತ್ನ ಮಾಡುತ್ತಿದೆ. ಈ ದಿಶೆಯಲ್ಲಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ಹಾಗೂ ಸಾಲ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದ್ದು ಅದನ್ನು ಸದ್ಬಳಕೆ ಮಾಡಿಕೊಳ್ಳಲು ವಿದ್ಯಾರ್ಥಿನಿಯರಿಗೆ ಸೂಚಿಸಿದರು.

**ಶ್ರೀ.ಬಿ.ಎನ್.ಪಾಟೀಲ** ನಿರ್ದೇಶಕರು, ಎಸ್.ಜೆ.ಎಂ. ವಿದ್ಯಾಪೀಠ (ರಿ), ಚಿತ್ರದುರ್ಗ. ಇವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಶ್ರೀ. ಜಗದ್ಗುರು ಮುರುಘಮಠದ ಸಂಯುಕ್ತಾಶ್ರಯದಲ್ಲಿ ಸತತವಾಗಿ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಜೊತೆಗೆ ದೇಶದ ಧರ್ಮ ಮತ್ತು ಸಂಸ್ಕೃತಿಗೆ ಪೂರಕವಾಗುವ ಹಲವಾರು ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುತ್ತಿದೆ. ವಿದ್ಯಾರ್ಥಿನಿಯರು ಪರಿಸರದ ಭವ್ಯ ಕಾಳಜಿಯೊಂದಿಗೆ ಉತ್ತಮ ಸಂಸ್ಕಾರಮಯ ಜೀವನವನ್ನು ಹೊಂದುವಂತೆ ಆಶಿಸಿದರು.

**ಡಾ.ಆರ್.ವಿ.ಹೆಗಡಾಳ** ಪ್ರಾಚಾರ್ಯರು, ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆ. ಮುಂದಿನ ಪೀಳಿಗೆಯ ಉತ್ತಮ ಜೀವನಕ್ಕೆ ನಮ್ಮ ಕಾರ್ಯಗಳು ನೆರವಾಗುತ್ತವೆ. ಎಂಬುದಕ್ಕೆ ಈ ಸಸಿ ನೆಡುವ ಕಾರ್ಯಕ್ರಮವೇ ಸ್ಪೂರ್ತಿ ಎಂದು ನೆರೆದ ಎಲ್ಲ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಹಾಗೆಯೇ ಈ ಕಾರ್ಯಕ್ರಮದಲ್ಲಿ **ಡಾ.ಎಂ.ಆರ್.ಚಿದಾನಂದಪ್ಪ,** ಮುಖ್ಯಸ್ಥರು ಕನ್ನಡ ವಿಭಾಗ ಹಾಗೂ ಕಾರ್ಯಕ್ರಮದ ಮುಖ್ಯ ಅಧಿಕಾರಿ ಎನ್.ಎಸ್.ಎಸ್. ಘಟಕ-1 ಇವರು ಸಂಪನ್ಮೂಲ ವ್ಯಕ್ತಿಗಳ ಕುರಿತು ಪರಿಚಯಿಸಿದರು. **ಪ್ರೊ. ಬಿ.ಆರ್.ಡಮ್ಮಳ್ಳಿ** ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ವಿಭಾಗ ಹಾಗೂ ಐ.ಕ್ಯೂ.ಎ.ಸಿ ಸಂಯೋಜಕರು. ಮತ್ತು **ಪ್ರೊ. ಕೆ. ಶಿವರಾಜಕುಮಾರ್** ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ ಹಾಗೂ ಕಾರ್ಯಕ್ರಮದ ಮುಖ್ಯ ಅಧಿಕಾರಿ ಎನ್.ಎಸ್.ಎಸ್. ಘಟಕ-2, ಮತ್ತು ಮಹಾವಿದ್ಯಾಲಯದ ಎಲ್ಲಾ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ಎಲ್ಲಾ ವಿದ್ಯಾರ್ಥಿನಿಯರು ಈ ಕಾರ್ಯಕ್ರಮಕ್ಕೆ ಮೆರಗನ್ನು ತಂದರು.



